*ದಿನಾಂಕ: 23.06.2018 ರಂದು ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಹಾಗೂ ಉಪ ಕಾರ್ಯದರ್ಶಿ (ಅ) ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ಕಾರ್ಯಪಾಲಕ ಅಭಿಯಂತರರು ರವರೊಂದಿಗೆ ನಡೆದ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.*

*********

ನಿರ್ದೇಶಕರು, ಗ್ರಾಮ ವಿಕಾಸ ರವರು ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರಿಗೆ ಇಲಾಖಾ ಪರವಾಗಿ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು. ಸಭೆಗೆ ಆಗಮಿಸಿದ್ದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಇಲಾಖಾ ಹಿರಿಯ ಅಧಿಕಾರಿಗಳು, ಇಲಾಖೆಯ ಎಲ್ಲಾ ಶಾಖೆಯ ನಿರ್ದೇಶಕರು, ಮುಖ್ಯಸ್ಥರುಗಳು, ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಉಪ ಕಾರ್ಯದರ್ಶಿಗಳು(ಅ) ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ಕಾರ್ಯಪಾಲಕ ಅಭಿಯಂತರರುಗಳು ಹಾಗೂ ಇತರೆ ಅಧಿಕಾರಿಗಳಿಗೂ ಸಭೆಗೆ ಸ್ವಾಗತಿಸಿ, ಸಭೆ ಪ್ರಾರಂಭದ ಮುನ್ನ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರನ್ನು ಸಭೆಯನ್ನು ಉದ್ದೇಶಿಸಿ ಪ್ರಾಸ್ತಾವಿಕ ನುಡಿಗಳನ್ನಾಡಲು ಪ್ರಧಾನ ಕಾರ್ಯದರ್ಶಿಗಳಿಗೆ ವಿನಂತಿಸಿದರು.

ಪ್ರಧಾನ ಕಾರ್ಯದರ್ಶಿಗಳು ಸಭೆಯನ್ನುದ್ದೇಶಿಸಿ, ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾನ್ಯ ಸಚಿವರಿಗೆ ಮತ್ತೊಮ್ಮೆ ಸಭೆಗೆ ಸ್ವಾಗತಿಸಿದರು. ಮಾನ್ಯ ಸಚಿವರು, ಅಧಿಕಾರವಹಿಸಿಕೊಂಡ ದಿನದಿಂದ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಪ್ರತಿಯೊಂದು ಯೋಜನೆಗಳ ಸವಿವರ ಮಾಹಿತಿ ಪಡೆದು, ಅವುಗಳ ಸಮರ್ಪಕ ಅನುಷ್ಠಾನಕ್ಕೆ ಇನ್ನಷ್ಟು ಮೌಲ್ಯಗಳನ್ನು ಒಗ್ಗೂಡಿಸಿ ಕ್ರಮ ಕೈಗೊಳ್ಳಲು ಸೂಚನೆ ನೀಡಿದ್ದು, ಇಲಾಖೆಯ ಮುಂದುವರೆದ ಯೋಜನೆಗಳ ಜೊತೆಗೆ ಹೊಸ ಯೋಜನೆಗಳನ್ನು ಸಮಗ್ರ ಕರ್ನಾಟಕದ 3.75 ಕೋಟಿ ಗ್ರಾಮೀಣ ಜನರ ಶ್ರೇಯೋಭಿವೃದ್ಧಿಗಾಗಿ ಹೊಸ ಆಯವ್ಯಯದಲ್ಲಿ ಘೋಷಿಸಲು ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಸಚಿವರು ಆಯವ್ಯಯ ಚರ್ಚೆಯಲ್ಲಿ ಮನವಿಸಿರುವ ಬಗ್ಗೆ, ಸಭೆಯಲ್ಲಿ ಪ್ರಸ್ತಾಪಿಸಿ, ಸಚಿವರ ಈ ಉತ್ಸಾಹಕ್ಕೆ ಕುಗ್ಗು ತರದೆ ಅವರ ಮಾಗದರ್ಶನದಲ್ಲಿ ಇಲಾಖಾ ಕಾರ್ಯಕ್ರಮಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಿಸಿ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಕಟ್ಟ ಕಡೆಯ ವ್ಯಕ್ತಿಗೆ ಯೋಜನೆಯ ಫಲಶೃತಿ ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ ಎಂಬ ಭರವಸೆಯನ್ನು ಪ್ರಧಾನ ಕಾರ್ಯದರ್ಶಿಗಳು ಸಚಿವರಿಗೆ ನೀಡಿದರು.

ಈ ದಿಸೆಯಲ್ಲಿ ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕಾರ್ಯೋನ್ಮುಖರಾಗಿ ಬದ್ಧತೆಯಿಂದ ಕಾರ್ಯನಿರ್ವಹಿಸಲು ಸೂಚನೆ ನೀಡಿದರು. ವಿಷಯಸೂಚಿಯಂತೆ ಪರಿಶೀಲನೆ ಕೈಗೊಳ್ಳಲು ಪ್ರಧಾನ ಕಾರ್ಯದರ್ಶಿಗಳು ಮಾನ್ಯ ಸಚಿವರಿಗೆ ಮನವರಿಸಿದರು.

ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ಸಭೆಯನ್ನುದ್ದೇಶಿಸಿ ಮಾತನಾಡಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಒಂದು ವಿಭಿನ್ನ ಹಾಗೂ ಎಲ್ಲಾ ಇಲಾಖೆಗಳ ಮಾತೃ ಇಲಾಖೆಯಂತೆ ಬೃಹತ್ ಇಲಾಖೆಯಾಗಿದ್ದು, ಎಲ್ಲಾ ಇಲಾಖೆಗಳ ಯೋಜನೆಗಳ ಸಮರ್ಪಕ ಅನುಷ್ಠಾನ ಪಂಚಾಯತ್ ರಾಜ್ ಸಂಸ್ಥೆಗಳ ಪ್ರಮುಖ ಜವಾಬ್ದಾರಿಯಾಗಿದ್ದು, ಇದನ್ನು ನಿಭಾಯಿಸುವಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪಾತ್ರ ಬಹು ಪ್ರಾಮುಖ್ಯವುಳ್ಳದಾಗಿದ್ದು, ಇಂತಹ ಗುರುತರ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವ/ಉಸ್ತುವಾರಿ ಮಾಡುವ ಸದಾವಕಾಶ ದೇವರು ಕರುಣಿಸಿರುವುದನ್ನು ಗರಿಷ್ಠವಾಗಿ ಸದುಪಯೋಗಪಡಿಸಿಕೊಂಡು ಯೋಜನೆಗಳ ಅನುಷ್ಠಾನ

ತೀವ್ರಗೊಳಿಸಿ ಫಲಪ್ರದಗೊಳಿಸಲು ಕರೆ ನೀಡಿದರು. ಇಲಾಖೆ ಅನುಷ್ಠಾನಗೊಳಿಸುತ್ತಿರುವ ಪ್ರತಿಯೊಂದು ಯೋಜನೆಗಳ ಕೂಲಂಕಷ ಪರಿಶೀಲನೆ ನಡೆಸಿ ಸಭೆಯು ಈ ಕೆಳಕಂಡ ನಿರ್ಣಯಗಳನ್ನು ಕೈಗೊಂಡಿತು.

## ಮಹಾತ್ಮ ಗಾಂದಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಎಂ.ಜಿ.ಎನ್.ಆರ್.ಇ.ಜಿ.ಎ):

1. ಸದರಿ ಯೋಜನೆಯಡಿ ಕೈಗೊಳ್ಳುವ ಚಟುವಟಿಕೆಗಳು ಇತರೆ ಇಲಾಖೆ ಚಟುವಟಿಕೆಗಳೊಂದಿಗೆ ಒಗ್ಗೂಡಿಸಿ ಅನುಷ್ಠಾನಗೊಳಿಸಬೇಕಾಗಿರುವುದರಿಂದ, ಸದರಿ ಯೋಜನೆಯಡಿ ಸಾಧಿಸುವ ಪ್ರಗತಿ ಇತರೆ ಇಲಾಖೆ ಪ್ರಗತಿಯನ್ನಾಧರಿಸಿರುವುದರಿಂದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಇತರೆ ಇಲಾಖಾ ಅಧಿಕಾರಿಗಳ (ಕೃಷಿ, ತೋಟಗಾರಿಕೆ, ಅರಣ್ಯ ಪ್ರವಾಸೋದ್ಯಮ ರೇಷ್ಮೆ, ಮೀನುಗಾರಿಕೆ, ಜಲಾನಯನ ಅಭಿವೃದ್ಧಿ , ಇತರೆ) ರಾಜ್ಯ ಮಟ್ಟದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಇವರ ಅಧ್ಯಕ್ಷತೆಯಲ್ಲಿ ನಿಯಮಿತವಾಗಿ ಸಭೆಯನ್ನು ಕರೆದು ಕ್ರಮವಹಿಸಲು ತಿಳಿಸಲಾಯಿತು.

(ಕ್ರಮ: ಆಯುಕ್ತರು, ಎಂ.ಜಿ.ಎನ್.ಆರ್.ಇ. ಜಿ.ಎ.)

2. ತತ್ಸಂಬಂದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಮಟ್ಟದಲ್ಲಿ ಇತರೆ ಇಲಾಖೆಗಳೊಂದಿಗೆ ಪರಿಶೀಲನೆ ನಡೆಸಿ ಇತ್ಯರ್ಥವಾಗದ ಸಮಸ್ಯೆಗಳಿದ್ದಲ್ಲಿ, ಅವುಗಳನ್ನು ಆಯುಕ್ತರು, ಗ್ರಾಮೀಣಾಭಿವೃದ್ಧಿರವರ ಗಮನಕ್ಕೆ ತಂದು ಪರಿಹಾರಗಳನ್ನು ಕಂಡು ಕೊಳ್ಳುವುದು.

3. ಪ್ರಸ್ತುತ ಸಾಲಿನಲ್ಲಿ 10 ಕೋಟಿ ಮಾನವ ದಿನ ಸೃಜನೆ ಗುರಿ ಹೊಂದಿದ್ದು, ರಾಜ್ಯಾದ್ಯಂತ ಉತ್ತಮ ಮಳೆಯಾಗಿರುವುದರಿಂದ ವೈಯಕ್ತಿಕ ಜಮೀನು ಅಭಿವೃದ್ಧಿ, ಕುರಿ ದನದ ದೊಡ್ಡಿ ನಿರ್ಮಾಣ, ಶಾಲಾ ಕಾಂಪೌಂಡ್, ರೈತರ ಕಣ, ಆಟದ ಮೈದಾನ, ಸ್ಮಶಾನ ಅಭಿವೃದ್ಧಿ ಇವೇ ಮುಂತಾದ ಕಾರ್ಯಕ್ರಮಗಳನ್ನು ಕೈಗೊಂಡು, 10 ಕೋಟಿ ಮಾನವ ದಿನ ಸೃಜನೆ ಗುರಿ ಮೀರಿ ಸಾಧಿಸಲು ಅಗತ್ಯ ಎಲ್ಲಾ ಮುಂಜಾಗರೂಕತಾ ಕ್ರಮ ಕೈಗೊಳ್ಳಲು ಸೂಚಿಸಿದರು.

4. ಸದರಿ ಯೋಜನೆಯಡಿ ಪ್ರವಾಸೋದ್ಯಮ ಅಭಿವೃದ್ಧಿ ಚಟುವಟಿಕೆ ಕೈಗೆತ್ತಿಕೊಳ್ಳಲು ವಿಪುಲ ಅವಕಾಶವಿರುವ ಜಿಲ್ಲೆಗಳು ಅವುಗಳ ಸದ್ಬಳಕೆಗೆ ಕ್ರಮ.

5. ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ Labour –Material ratio ಸಮನ್ವಯಗೊಳಿಸಲು ಪ್ರತಿ ಗ್ರಾಮ ಪಂಚಾಯತಿಗಳಲ್ಲಿ ಕೈಗೆತ್ತಿಕೊಳ್ಳುವ ಚಟುವಟಿಕೆಗಳನ್ನು ಅದರಂತೆ ಆಯ್ಕೆಮಾಡಿ; ಯೋಜಿಸಿ ಅಗತ್ಯಕ್ರಮ ಕೈಗೊಳ್ಳುವುದು.

6. ಎಲ್ಲಾ ಶಾಲಾ-ಕಾಲೇಜು, ಅಂಗನವಾಡಿ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಭ್ಯವಿರುವ ಜಾಗದಲ್ಲಿ ಪೌಷ್ಠಿಕತೆವುಳ್ಳ ಹಣ್ಣು ಹಂಪಲುಗಳನ್ನು ಕೈ ತೋಟದಲ್ಲಿ ಬೆಳೆಸಲು ಅಗತ್ಯ ಕ್ರಮ.

7. ಶಾಲಾ ಕಾಂಪೌಂಡ್ ನಿರ್ಮಾಣಕ್ಕೆ ತೆಗೆದುಕೊಳ್ಳುವ ಕಾಮಗಾರಿಗಳ ಉದ್ದದಲ್ಲಿ ಯಾವುದೇ ಮಿತಿಯಿರುವುದಿಲ್ಲವೆಂದು ಸಭೆಯಲ್ಲಿ ಸ್ಪಷ್ಟಪಡಿಸಲಾಯಿತು.

8. ಕೆರೆ ಒತ್ತುವರಿ ತಡೆ ಹಿಡಿಯಲು ಹಾಗೂ ಸಂರಕ್ಷಿಸಲು ಕೆರೆ ವಿಸ್ತೀರ್ಣದ ಸುತ್ತ ಟ್ರೆಂಚಿಂಗ್ ಮಾಡುವುದು, ಗಿಡ ಮರಗಳನ್ನು ನೆಡುವ ಕಾರ್ಯ ಕೈಗೊಳ್ಳುವುದು. ಕೆರೆ ಗಡಿ ವಿವಾದಗಳಿದ್ದಲ್ಲಿ ಅವುಗಳನ್ನು ಭೂ ದಾಖಲೆ ಇಲಾಖೆ ಸಂಬಂಧಪಟ್ಟ ಅಧಿಕಾರಿಗಳೊಡನೆ/ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ಇತ್ಯರ್ಥಪಡಿಸಿಕೊಂಡು ಅಗತ್ಯ ಕ್ರಮ ಕೈಗೊಳ್ಳುವುದು.

(ಕ್ರಮ: ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)

9. ಪ್ರತಿ ಗ್ರಾಮ ಪಂಚಾಯತಿಗಳಲ್ಲಿ ವಿವಿಧ ಯೋಜನೆಗಳಡಿ ರಸ್ತೆ ನಿರ್ಮಾಣ ಕೈಗೊಳ್ಳುವಾಗ ರಸ್ತೆ ಬದಿಗಳಲ್ಲಿ ಸಂಪೂರ್ಣವಾಗಿ ಕಾಂಕ್ರಿಟ್ ಹಾಕುವ ಬದಲಾಗಿ ಮಧ್ಯ ಮಧ್ಯ ಗಿಡ ನೆಡಲು ಅವಕಾಶ ಕಲ್ಪಿಸಿ ರಸ್ತೆ ಚರಂಡಿ ನಿರ್ಮಾಣ ಮಾಡಲು ಕ್ರಮ.

10. ನದಿಗಳ ಪುನಃಶ್ಚೇತನ ಕಾರ್ಯ ಕೈಗೊಳ್ಳಲು ಅವಕಾಶವಿರುವ ಜಿಲ್ಲೆಗಳಲ್ಲಿ ಅಗತ್ಯ ಕ್ರಮ ರೂಪಿಸುವುದು.

(ಕ್ರಮ: ಎಲ್ಲಾ ಜಿಲ್ಲಾ ಪಂಚಾಯತಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)

11. ಕೆರೆಗಳನ್ನು ಅಭಿವೃದ್ಧಿಗೊಳಿಸುವ ಯೋಜನೆಯಡಿ ಚಟುವಟಿಕೆ ಕೈಗೊಳ್ಳಲು ಅವಕಾಶ ಕಲ್ಪಿಸಿಕೊಡುವ ಬಗ್ಗೆ ಅಗತ್ಯ ಕ್ರಮ.

(ಕ್ರಮ:ಆಯುಕ್ತರು, ಎಂ.ಜಿ.ಎನ್.ಆರ್.ಇ.ಜಿ.ಎ)

12. ರಾಜ್ಯದಲ್ಲಿ ಪ್ರತಿ ವರ್ಷ ಸರಿ ಸುಮಾರು ಒಂದು ಲಕ್ಷ ಎಕರೆ ಜಮೀನು ತೋಟಗಾರಿಕೆಯಡಿ ವಿಸ್ತರಿಸಲಾಗುತ್ತಿದ್ದು ಈ ಬಗ್ಗೆ ಸದರಿ ಯೋಜನೆಯಡಿ ಅಗತ್ಯ ತೋಟಗಾರಿಕಾ ಚಟುವಟಿಕೆ ಕೈಗೆತ್ತಿಕೊಳ್ಳುವುದು.

13. ಹಿಂದಿನ ವರ್ಷದ ಸಾಧನೆಯ ಜೊತೆಗೆ ಮಾನವ ದಿನ ಸೃಜನೆ ಜಿಲ್ಲಾವಾರು ಗುರಿ ವೈಜ್ಞಾನಿಕವಾಗಿ ಅಗತ್ಯತೆ ಹಾಗೂ ವಿಪುಲ ಅವಕಾಶಗಳನ್ನು (Potentiality) ಆಳವಾಗಿ ಯೋಚಿಸಿ ನಿರ್ಧರಿಸಲು ಕ್ರಮ.

14. ಪ್ರತಿ ಗ್ರಾಮ ಪಂಚಾಯತ್‌ನ ಹಾಲು ಉತ್ಪಾದನಾ ಕೇಂದ್ರ / ಸಂಘ ಸಂಸ್ಥೆಗಳಿಂದ ಹಾಲು ಉತ್ಪಾದಕರ ವಿಳಾಸ ಪಡೆದು ಅವರುಗಳಿಗೆ ದನದ ಕೊಟ್ಟಿಗೆ ನಿರ್ಮಾಣಕ್ಕೆ ಅವಕಾಶ ಮಾಡಿಕೊಡಲು ಕ್ರಮ.

(ಕ್ರಮ: ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)

15. ಯೋಜನೆಯ ಪ್ರತಿಯೊಂದು ಅಂಶದಡಿ ಕೂಲಂಕಷ ಚರ್ಚೆ ನಡೆಸಿದ ನಂತರ , ವಿಫುಲ ಅವಕಾಶವಿದ್ದರೂ ಸದರಿ ಯೋಜನೆಯಡಿ ನಿರೀಕ್ಷಿತ ಮಟ್ಟದಲ್ಲಿ ಸಾಧನೆಯಾಗದಿರುವುದನ್ನು ಸಭೆಯು ಮನಗೊಂಡು, ಪ್ರಸ್ತುತ ಸಾಲಿನಲ್ಲಿ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆ ಸಹ ತುಂಬಿರುವುದರಿಂದ ಗರಿಷ್ಠ ಪ್ರಗತಿ ಸಾಧಿಸಿ ರಾಜ್ಯದ ಹಿರಿಮೆಯನ್ನು ರಾಷ್ಟ್ರಮಟ್ಟಕ್ಕೆ ಕೊಂಡೊಯ್ಯಲು ಪ್ರಾಮಾಣಿಕ ಪ್ರಯತ್ನ ಮಾಡಲು ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಚಿವರು ಸೂಚನೆ ನೀಡಿದರು.

## ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು:

### ಶುದ್ಧ ಕುಡಿಯುವ ನೀರು ಘಟಕಗಳು:

16. ರಾಜ್ಯದಲ್ಲಿ ಕಾರ್ಯಾಚರಣೆಗೊಂಡಿರುವ ಶುದ್ಧ ಕುಡಿಯುವ ನೀರು ಘಟಕಗಳಲ್ಲಿ 1100 ಘಟಕಗಳು ಕಾರ್ಯಾಚರಣೆಯಾಗದೆ ದುಸ್ಥಿತಿಯಲ್ಲಿರುವುದನ್ನು ಖಾತ್ರಿಪಡಿಸಲು ಜಿಲ್ಲಾ ಮಟ್ಟದ ಕುಡಿಯುವ ನೀರು ಸರಬರಾಜು, ಕಾರ್ಯಪಾಲಕ ಅಭಿಯಂತರುಗಳ ನೇತೃತ್ವದಲ್ಲಿ ತಂಡ ರಚಿಸಿಕೊಂಡು ತಂಡವು ಪ್ರತಿಯೊಂದು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಶುದ್ಧ ಕುಡಿಯುವ ನೀರು ಘಟಕಗಳಿಗೆ ಭೇಟಿ ನೀಡಿ ತಪಾಸಣೆ ನಡೆಸಿ ಇಲಾಖೆ ಒದಗಿಸಿರುವ ನಿಗಧಿತ ನಮೂನೆಯಲ್ಲಿ ಘಟಕದ ಸ್ಥಿತಿ–ಗತಿ ವರದಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ದಿನಾಂಕ: 27.06.2018 ರೊಳಗೆ ಸರ್ಕಾರಕ್ಕೆ ಸಲ್ಲಿಸುವುದು.

17. ದುಸ್ಥಿತಿಯಲ್ಲಿರುವ ಎಲ್ಲಾ ಘಟಕಗಳನ್ನು ಸುಸ್ಥಿತಿಗೊಳಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತುರ್ತು ಕ್ರಮ ಕೈಗೊಂಡು ಅವುಗಳ ನಿರ್ವಹಣೆಗೆ ಕ್ರಮ ವಹಿಸುವುದು.

18. ಘಟಕಗಳು ಸ್ಥಾಪನೆಗೊಂಡು ಒಂದು ವರ್ಷದೊಳಗಿರುವ ದುಸ್ಥಿತಿಯಲ್ಲಿರುವ ಘಟಕಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆ ಹಾಗೂ ಒಂದು ವರ್ಷ ಮೀರಿರುವ ಘಟಕಗಳನ್ನು ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ ವತಿಯಿಂದ ಸುಸ್ಥಿತಿಗೊಳಿಸಿದ ನಂತರವೇ ನಿರ್ವಹಣೆಗೆ ಹಸ್ತಾಂತರಿಸಬೇಕು.

19. ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ, ಕೆ.ಆರ್.ಐ.ಡಿ.ಎಲ್., ಎಂ.ಎಲ್.ಎ., ಎಂ.ಪಿ.ನಿಧಿ, ಗ್ರಾಮ ಪಂಚಾಯತಿ ಓ.ಎಸ್.ಆರ್., ಸಹಕಾರ ಸಂಘ ಸಂಸ್ಥೆಗಳು, ಗಣ್ಯರು ಇವರುಗಳಿಂದ ಸ್ಥಾಪಿಸಿರುವ ಎಲ್ಲಾ ಘಟಕಗಳ ಮಾಹಿತಿಯ ವರದಿ ಸಂಗ್ರಹಿಸುವುದು.

20. ಏಜೆನ್ಸಿ ತೊಂದರೆಗಳನ್ನು ಆಯುಕ್ತರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆರವರು ಒಂದು ವಾರದೊಳಗೆ ಇತರ್ಥ್ಯಗೊಳಿಸುವುದು.

21. ಘಟಕಗಳ ದುರಸ್ಥಿಗೆ ಈಗಾಗಲೇ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅನುದಾನ ಒದಗಿಸಲಾಗಿದೆ, ಅದರಲ್ಲಿ ದುರಸ್ಥಿ ಕಾರ್ಯಕೈಗೊಂಡು ಇನ್ನೂ ಹೆಚ್ಚಿನ ಅನುದಾನದ ಅಗತ್ಯವಿದ್ದಲ್ಲಿ ತಕ್ಷಣ e-mail ಮೂಲಕ ಅನುದಾನ ಅಗತ್ಯತೆ ಕೋರುವುದು.

22. ಸದೃಢ ಗ್ರಾಮ ಪಂಚಾಯತಿಗಳು, ನಿರ್ವಹಣೆ ಜವಾಬ್ದಾರಿ ವಹಿಸಿಕೊಳ್ಳಲು ಆಸಕ್ತಿಯಿದ್ದಲ್ಲಿ ಘಟಕಗಳನ್ನು ಗ್ರಾಮ ಪಂಚಾಯ್ತಿಗಳಿಗೆ ಹಸ್ತಾಂತರಿಸಲು ಕ್ರಮ.

23. ಟೆಂಡರ್ ಮುಖಾಂತರ ವಹಿಸಿರುವ ಘಟಕಗಳನ್ನು ಗುತ್ತಿಗೆದಾರರು ನಿರ್ವಹಣೆ ಮಾಡದಿದ್ದಲ್ಲಿ, ಗುತ್ತಿಗೆ ರದ್ದುಪಡಿಸಿ ನಿರ್ವಹಣೆಗೆ ಪರ್ಯಾಯ ಕ್ರಮ.

24. ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆಗೆ ತಾಲ್ಲೂಕನ್ನು ಘಟಕವನ್ನಾಗಿ ಪರಿಗಣಿಸಿ ಗುತ್ತಿಗೆ ವಹಿಸಲು ಕ್ರಮ. ಗ್ರಾಮ ಪಂಚಾಯಿತಿಗಳಿಗೆ FTK ಉಪಕರಣಗಳನ್ನು ಒದಗಿಸಿ ನೀರಿನ ಪರೀಕ್ಷೆ ನಡಸಲು ಕ್ರಮ.

25. ಘಟಕಗಳ ನಿರ್ವಹಣೆಗೆ Self Sustaining Mechanism ಗೆ ಅಗತ್ಯವಿರುವ ಎಲ್ಲಾ ಕ್ರಮ ಕೈಗೊಳ್ಳುವುದು.

26. ಶುದ್ಧ ಕುಡಿಯುವ ನೀರಿನ ಸರಬರಾಜಿಗೆ ಸಮಂಜಸ ದರ ನಿರ್ಧರಿಸಲು ಹಾಗೂ Coin, Smart Card ಬಳಕೆಗೆ ಕ್ರಮ.

27. ಟೆಂಡರ್ ಕರೆಯುವ ಹಂತದಲ್ಲಿಯೇ Complaint Monitoring System ಅಳವಡಿಸಿ Compliance ಪಡೆಯುವ ಪದ್ಧತಿ ಅಳವಡಿಸಲು ಕ್ರಮ.

28. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳು, ಶುದ್ಧ ಕುಡಿಯುವ ನೀರಿನ ಘಟಕಗಳ ದುರಸ್ತಿ ಕಾರ್ಯ ಕೈಗೊಂಡು ಮಾಧ್ಯಮಗಳಲ್ಲಿ ಪ್ರಚಾರ ನೀಡುವುದು. ಕಾಮಗಾರಿ ಛಾಯಾಚಿತ್ರ ಇತರೆ ಮಾಹಿತಿಗಳನ್ನು ವಾಟ್ಸ್ ಆಫ್ ಸಂದೇಶದಲ್ಲಿ ಆಯುಕ್ತರು, ಮುಖ್ಯ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ಸರಬರಾಜು ನೈರ್ಮಲ್ಯ ಇಲಾಖೆರವರಿಗೆ ಕಳುಹಿಸಿಕೊಡಲು ಕ್ರಮ.

29. ಶುದ್ಧ ಕುಡಿಯುವ ನೀರು ಘಟಕಗಳ ದುರಸ್ತಿ ಕಾರ್ಯ ಯಾವುದೇ ಕಾರಣದಿಂದಲೂ 05-07-2018 ರೊಳಗೆ ಮುಗಿಸಿ ವರದಿ ಸಲ್ಲಿಸಲು ಸೂಚಿಸಲಾಯಿತು.

**NRDWP ಕ್ರಿಯಾ ಯೋಜನೆಗಳ ಸಲ್ಲಿಕೆ (2018-19)**

30. ಬರಗಾಲ ಸಮಯದಲಲಿ ಟಾಸ್ಕ್ ಪೋರ್ಸ್ ಅನುದಾನ ಮೀರಿ ಕೊರೆಯಿಸಿರುವ ಬೋರ್‌ವೆಲ್‌ಗಳಿದ್ದಲ್ಲಿ, ಅವುಗಳನ್ನು 2018-19 ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಅಳವಡಿಸಲು ಕ್ರಮ.

(ಕ್ರಮ: ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)

31. 2018-19ನೇ ಸಾಲಿಗೆ NRDWP ಯಡಿ ಒದಗಿಸಿರುವ ರೂ. 2200.00 ಕೋಟಿ ಅನುದಾನವನ್ನು ದಿನಾಂಕ: 27.06.2018 ರೊಳಗೆ ಜಿಲ್ಲಾವಾರು ಹಂಚಿಕೆ ಮಾಡುವುದು.

(ಕ್ರಮ: ಆಯುಕ್ತರು, ಗ್ರಾ.ನೀ.ಸ.ನೈ.ಇಲಾಖೆ)

32. ಜಿಲ್ಲೆಯಿಂದ ಪಡೆದ ಕ್ರಿಯಾ ಯೋಜನೆಗಳನ್ನು ಪರಿಶೀಲಿಸಿ 10.06.2016 ರೊಳಗೆ SLSSC ಅನುಮೋದನೆಗೆ ಮಂಡಿಸುವುದು.

33. ಚಿತ್ರದುರ್ಗ ಜಿಲ್ಲೆಯಲ್ಲಿ ಏಪ್ರಿಲ್, ಮೇ 2018 ತಿಂಗಳುಗಳಲ್ಲಿ ಟ್ಯಾಂಕರ್ ಮೂಲಕ ಕುಡಿಯುವ ನೀರು ಒದಗಿಸಿದ್ದು, ಬರಗಾಲವಿಲ್ಲದ ಕಾರಣ ಜಿಲ್ಲಾಧಿಕಾರಿಗಳು ಅನುದಾನ ನೀಡದಿರುವುದನ್ನು ಸಭೆಯು ಗಮನಕ್ಕೆ ತಂದುಕೊಂಡು, ಸದರಿ ಹಣವನ್ನು SDRF ಅಥವಾ ಇನ್ನಿತರೆ ಮೂಲಗಳಿಂದ ಒದಗಿಸಲು ಅಗತ್ಯ ಕ್ರಮ.

(ಕ್ರಮ: ಆಯುಕ್ತರು, ಗ್ರಾ.ನಿ.ಸ.ನೈ. ಇಲಾಖೆ)

**<u>ಸ್ವಚ್ಛ ಭಾರತ್ ಅಭಿಯಾನ (SBM)</u>**

34. ರಾಜ್ಯದಲ್ಲಿ 20 ಜಿಲ್ಲೆಗಳು ಬಯಲು ಬಹಿರ್ದೆಸೆ ಮುಕ್ತವಾಗಿದ್ದು, ಬಾಕಿ ಸಂಬಂಧಪಟ್ಟ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಭಾರತ ಸರ್ಕಾರ ನಿಗಧಿಪಡಿಸಿದ ದಿನಾಂಕದೊಳಗೆ ODF ಮಾಡಲು ಅಗತ್ಯ ಕ್ರಮ ಕೈಗೊಂಡು, 31-07-2018 ರೊಳಗೆ ಸರ್ಕಾರಕ್ಕೆ ವರದಿ ಸಲ್ಲಿಸುವುದು.

35. ಬೀದರ್, ಬಳ್ಳಾರಿ, ಗುಲ್ಬರ್ಗಾ, ರಾಯಚೂರು ಜಿಲ್ಲಾ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ವೈಯಕ್ತಿಕ ಗಮನ ಹರಿಸಿ ಆದ್ಯತೆ ಮೇಲೆ ಅಗತ್ಯ ಕ್ರಮ ಕೈಗೊಳ್ಳುವುದು.

ಗ್ರಾಮೀಣ ರಸ್ತೆಗಳು

ನಬಾರ್ಡ್ ರಸ್ತೆಗಳು:

36. ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ.

37. ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಅನುಷ್ಠಾನ ಸಂಸ್ಥೆಗಳಿಗೆ ವಿಳಂಬವಿಲ್ಲದೆ ಮರು-ಹಂಚಿಕೆಗೆ ಕ್ರಮ.

ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ (N.G.N.R.)

38. ಕಾಮಗಾರಿಗಳ ನಿಯಮಿತ ಪರಿಶೀಲನೆ ಮತ್ತು ಗುಣಮಟ್ಟದ ಕಾಮಗಾರಿಗಳ ಆದ್ಯತೆಗೆ ಕ್ರಮ.

39. ರಸ್ತೆ ಕಾಮಗಾರಿಗಳಿಗೆ ಅವಶ್ಯವಿರುವಡೆ ಭೂ ವಿವಾದಗಳ ಪರಿಹಾರಕ್ಕೆ ಕ್ರಮ.

40. ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಕಾಮಗಾರಿಗಳ ವಿವರಗಳ ದಾಖಲಾತಿಗೊಳಿಸಿ ಪಾವತಿ ಆದೇಶ ಸೃಜಿಸಿ ಹಣ ಪಾವತಿಗೆ ಕ್ರಮ.

41. D.R.R.P ಯಡಿ ಇತ್ಯರ್ಥಗೊಳಿಸಿರುವ ಜಿಲ್ಲಾವಾರು ರಸ್ತೆ ಉದ್ದವನ್ನು , ಜಿಲ್ಲಾ ಪಂಚಾಯತಿ ಸಾಮಾನ್ಯ ಸಭೆಗಳಲ್ಲಿ ಮಂಡಿಸಿ ಅನುಮೋದನೆ ಪಡೆಯುವುದು.

ಕೆರೆ ಒತ್ತುವರಿ:

42. ಕೆರೆ ಗಡಿ ಗುರ್ತು ಮಾಡಿ, ಅದರ ಸುತ್ತಲೂ ಟ್ರೆಂಚಿಂಗ್ ಮಾಡಿ / ಗಿಡಗಳನ್ನು ನೆಟ್ಟು ಒತ್ತುವರಿ ತಡೆಗಟ್ಟಲು ಕ್ರಮ.

43. ಮಾನ್ಯ ಲೋಕಾಯುಕ್ತರವರು, ಈ ಬಗ್ಗೆ ದಿನ ಪತ್ರಿಕೆಯಲ್ಲಿ ನಿರ್ದೇಶನ ನೀಡಿರುವುದನ್ನು ಪಾಲಿಸಲು ಕ್ರಮ.

44. ಜಿಲ್ಲಾ ಪಂಚಾಯತಿಗಳಿಗೆ ಸಣ್ಣ ನೀರಾವರಿ ಇಲಾಖೆಯಿಂದ ಹಸ್ತಾಂತರಿಸಿರುವ ಸಣ್ಣ ಕೆರೆಗಳ ನಿರ್ವಹಣೆಗೆ ಆದ್ಯತಾ ಕ್ರಮ.

**ಪಂಚಾಯತ್ ರಾಜ್ ಸಂಸ್ಥೆ ವಿಷಯಗಳು:**

45. ರಾಜ್ಯದಲ್ಲಿ 6024 ಗ್ರಾಮ ಪಂಚಾಯಿತಿಗಳು ಕಾರ್ಯನಿರ್ವಹಿಸುತ್ತಿದ್ದು, 2015ನೇ ಸಾಲಿನಲ್ಲಿ ತಿದ್ದುಪಡಿ ತಂದಿದ್ದರೂ 1421 ಗ್ರಾಮ ಪಂಚಾಯಿತಿಗಳು ಮಾತ್ರ ತೆರಿಗೆ ಪರಿಷ್ಕರಣೆ ಮಾಡಿದ್ದು, ಇದು ವಿಷಾಧನೀಯ ಸಂಗತಿಯಾಗಿದೆ. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ಈ ದಿಸೆಯಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದು. ಸರ್ಕಾರದಿಂದ ಈ ಚಟುವಟಿಕೆ ಸಂಪೂರ್ಣಗೊಳಿಸಲು ಗಡುವು, ದಿನಾಂಕ ನಿಗದಿಪಡಿಸಿ ಪ್ರತಿ ಮಾಹೆ ಪ್ರಗತಿ ಪರಿಶೀಲನೆ ಕೈಗೊಳ್ಳುವುದು.

46. ತೆರಿಗೆ ವಸೂಲಾತಿ ಮಾಹಿತಿಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಇಂದೀಕರಿಸಲು ತುರ್ತು ಕ್ರಮ ಕೈಗೊಳ್ಳುವುದು.

47. ಗ್ರಾಮ ಪಂಚಾಯಿತಿಗಳು ಸ್ವಂತ ಸಂಪನ್ಮೂಲ ಕ್ರೋಢೀಕರಣಕ್ಕೆ ಒತ್ತು ನೀಡುವುದು.

48. ಹೆಚ್ಚಿನ ಪ್ರಮಾಣದಲ್ಲಿ ತೆರಿಗೆ ಸಂಗ್ರಹಿಸುವ ಬಿಲ್ ಕಲೆಕ್ಟರ್‌ಗಳಿಗೆ ಹಾಗೂ ಗ್ರಾಮ ಪಂಚಾಯತಿಗಳಿಗೆ ಪ್ರೋತ್ಸಾಹ ನೀಡುವಂತೆ ಕಾರ್ಯಕ್ರಮ ಹಮ್ಮಿಕೊಳ್ಳಲು ಅಗತ್ಯ ಕ್ರಮ.

(ಕ್ರಮ: ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)

ಜೀತ ವಿಮುಕ್ತರ ಪುನರ್ವಸತಿ ಕಾರ್ಯಕ್ರಮ:

49. ಸದರಿ ಆರ್ಥಿಕ ವರ್ಷ ಮುಕ್ತಾಯವಾಗುವುದರೊಳಗೆ ಈಗಾಗಲೇ ಗುರುತಿಸಿರುವ 1681 ಜೀತದಾಳುಗಳಿಗೂ ವಸತಿ ಸೌಲಭ್ಯವನ್ನು ಪ್ರಥಮ ಆದ್ಯತೆ ಮೇರೆಗೆ ಕಲ್ಪಿಸಬೇಕು.

50. ಚಿಕ್ಕಬಳ್ಳಾಪುರದಲ್ಲಿ 923 ಜೀತವಿಮುಕ್ತರಿಗೆ ಪಡಿತರ ಸೌಲಭ್ಯವನ್ನು ಹಾಗೂ ನರೇಗಾ ಜಾಬ್ ಕಾರ್ಡ್ ಹಂಚಿಕೆಯನ್ನು ಕಡ್ಡಾಯವಾಗಿ ತಕ್ಷಣ ಮಾಡಬೇಕು.

51. ಕೌಶಲ್ಯಾಭಿವೃದ್ಧಿ ಯೋಜನೆಗಳಡಿ ಜೀತವಿಮುಕ್ತರಿಗೆ ಸ್ವಾವಲಂಭಿಗಳಾಗಲು ಸ್ವ-ಉದ್ಯೋಗ ಸೌಲಭ್ಯ, ಉದ್ಯೋಗ ತರಬೇತಿ ಸೌಲಭ್ಯಗಳನ್ನು DDUGKY, NRLM ಗಳಡಿ ಒದಗಿಸಲು ಇನ್ನು 15 ದಿನದೊಳಗೆ ಜೀತದಾಳುವಾರು ಸರ್ಕಾರಕ್ಕೆ ಕ್ರಿಯಾ ಯೋಜನೆ ತಯಾರಿಸಿ ಮಾಹಿತಿ ನೀಡಬೇಕು. ಅವರುಗಳಿಗೆ ಅಗತ್ಯ ಅನುದಾನವನ್ನು ಜಿಲ್ಲಾ ಪಂಚಾಯತಿಗಳು ಕಾಯ್ದಿರಿಸಬೇಕು.

ಸಾಮಾನ್ಯ ವಿಷಯಗಳು:

52. ಕೇಂದ್ರ ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳಡಿ ಸಾಧಿಸಿದ ಪ್ರಗತಿಯ ಪರಿಶೀಲನೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಮಾರ್ಗದರ್ಶನದಡಿ ರಚಿಸಲಾಗಿರುವ DISTRICT DEVELOPMENT COORDINATION AND MONITORING COMMITTEE (DISHA) ಸಭೆಗಳನ್ನು ನಿಯಮಿತವಾಗಿ ನಡೆಸಲು ಕ್ರಮ.

53. ರಾಯಚೂರು, ಬಿಜಾಪುರ, ಬಳ್ಳಾರಿ ಹಾಗೂ ಶಿವಮೊಗ್ಗ ಜಿಲ್ಲೆಗಳು 2017-18ನೇ ಸಾಲಿನಲ್ಲಿ ಸಭೆ ನಡೆಸಿರುವ ಮಾಹಿತಿ ನೀಡಿರುವುದಿಲ್ಲ, ಅವುಗಳನ್ನು ಖಚಿತಪಡಿಸುವುದು.

54. DISHA ಸಭೆಗಳನ್ನು ಪೂರ್ಣಗೊಳಿಸಿದ ತಕ್ಷಣ ಅದರ ನಡವಳಿಗಳನ್ನು ಭಾರತ ಸರ್ಕಾರದ ಜಾಲತಾಣದಲ್ಲಿ ಆರೋಹಿಸಲು ಕ್ರಮ.

(ಕ್ರಮ:ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು)

55. ಸಾಲು ಮರದ ತಿಮ್ಮಕ್ಕನ ಮಾದರಿಯಲ್ಲಿ ರಸ್ತೆ ಇಕ್ಕೆಲು ಗಳಲ್ಲಿ ಗಿಡ ನೆಡಲು ಕ್ರಮ.

56. ಇತ್ತೀಚೆಗೆ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಹುದ್ದೆ ಭರ್ತಿ ಮಾಡುವ ಸಂಬಂಧ, ಅವರ ದಾಖಲಾತಿ ಪರಿಶೀಲನೆ ಬಾಕಿ ಇರುವ ಜಿಲ್ಲೆಗಳು ಆದ್ಯತೆ ಮೇಲೆ ಕ್ರಮ ಕೈಗೊಳ್ಳುವುದು.ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳು ಹುದ್ದೆಗೆ ಕರ್ತವ್ಯ ವರದಿ ಮಾಡಿಕೊಳ್ಳದೆ ಲಿಖಿತ ಮೂಲಕ ಮಾಹಿತಿ ನೀಡಿದ್ದಲ್ಲಿ ಸದರಿ ಹುದ್ದೆಗಳನ್ನು ತುಂಬಲು. ಸಹ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವುದು.

57. ರಾಯಚೂರು ಮತ್ತು ಯಾದಗಿರಿ ಜಿಲ್ಲೆ Aspirational Districts ಬಗ್ಗೆ ಕೇಳಿರುವ ಮಾಹಿತಿ ಹಾಗೂ ಮಿಷನ್ ಅಂತ್ಯೋದಯ ಯೋಜನೆಯಡಿ 4 ಜಿಲ್ಲೆಗಳಿಂದ ಕೇಳಿರುವ ಮಾಹಿತಿಗಳನ್ನು ಸಂಬಂಧ ಪಟ್ಟ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಕ್ಷಣ ಒದಗಿಸಿ ಅನುಷ್ಠಾನ ಕ್ರಮಕ್ಕೆ ಒತ್ತು ನೀಡುವುದು.

58. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಸಾಮಾಜಿಕ ಪರಿಶೋಧನೆ ತಂಡದವರು ಯೋಜನೆ ಅನುಷ್ಠಾನಕ್ಕೆ ಅನಾನುಕೂಲವಾಗುವಂತಹ/ಅಡ್ಡಿಯನ್ನುಂಟು ಮಾಡುವ, ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಉತ್ಸುಕತೆ ಹೊಂದಿರುವ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ Demoralising

effect ಉಂಟು ಮಾಡುವ ತೀರ್ಮಾನಗಳನ್ನು ನೀಡದೆ ನಿಯಮಾನುಸಾರ ಪರಿಶೋಧನೆ ಕಾರ್ಯ ಕೈಗೆತ್ತಿಕೊಳ್ಳಲು ಸಭೆಯು ಮನಗೊಂಡಿತು.

(ಕ್ರಮ: ಸಂಬಂಧಪಟ್ಟ ಆಯುಕ್ತರು / ನಿರ್ದೇಶಕರುಗಳು)

ಮೇಲ್ಕಂಡ ಎಲ್ಲಾ ಅಂಶಗಳಡಿ ಅಗತ್ಯ ಕ್ರಮ ಕೈಗೊಂಡು ಅನುಪಾಲನಾ ವರದಿಯನ್ನು ಸಂಬಂಧಪಟ್ಟ ಶಾಖೆಯ ನಿರ್ದೇಶಕರು/ಮುಖ್ಯಸ್ಥರುಗಳಿಗೆ ನಡವಳಿ ತಲುಪಿದ ಒಂದು ವಾರದೊಳಗೆ ಸಲ್ಲಿಸಲು ಸೂಚಿಸಿ ಸಭೆ ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

(ಕೃಷ್ಣ ಭೈರೇಗೌಡ)
ಸಚಿವರು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ.

ಸಂಖ್ಯೆ: ಗ್ರಾಅಪ/48/ಯೋಉಮಾ/2018 ದಿನಾಂಕ: 03/07/2018

ಇವರಿಗೆ :

1. ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಹಾಗೂ ಉಪ ಕಾರ್ಯದರ್ಶಿಗಳ (ಅಭಿವೃದ್ಧಿ)
2. ಆಯುಕ್ತರು, ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆ.
3. ಆಯುಕ್ತರು, ಕ.ಗ್ರಾ.ನೀ.ಸ. & ನೈರ್ಮಲ್ಯ ಇಲಾಖೆ.
4. ಅಭಿಯಾನ ನಿರ್ದೇಶಕರು, ಎನ್.ಆರ್.ಎಲ್.ಎಮ್.
5. ನಿರ್ದೇಶಕರು, ಪಂಚಾಯತ್ ರಾಜ್– 1.
6. ನಿರ್ದೇಶಕರು, ಪಂಚಾಯತ್ ರಾಜ್–2.
7. ನಿರ್ದೇಶಕರು, ಸ್ವ.ಉ.ಕಾ.
8. ನಿರ್ದೇಶಕರು, ಗ್ರಾಮ ವಿಕಾಸ.
9. ನಿರ್ದೇಶಕರು, ಇ–ಆಡಳಿತ.
10. ಆಂತರಿಕ ಆರ್ಥಿಕ ಸಲಹೆಗಾರರು.
11. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು.
12. ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ.
13. ಮುಖ್ಯ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ.
14. ಮುಖ್ಯ ಇಂಜಿನಿಯರ್, ಪಂ.ರಾಜ್ ಇಂ.ಇಲಾಖೆ, ಬೆಂಗಳೂರು.
15. ಸಲಹೆಗಾರರು, ಕರ್ನಾಟಕ ಸಮಗ್ರ ಪೌಷ್ಟಿಕ ಅಭಿವೃದ್ಧಿ ಯೋಜನೆ (ಬಾಹ್ಯ ನೆರವಿನ ಯೋಜನೆ), NRLM.
16. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ.
17. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಗಮ, ಬೆಂಗಳೂರು.
18. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ.

19. ಕಾರ್ಯನಿರ್ವಾಹಕ ನಿರ್ದೇಶಕರು, ಎಂ.ಜಿ.ಐ.ಆರ್.ಇ.ಡಿ.

20. ಅಪರ ನಿರ್ದೇಶಕರು, ಎಸ್.ಬಿ.ಎಮ್.

21. ಜಂಟಿ ನಿರ್ದೇಶಕರು, ರಸ್ತೆ ಮತ್ತು ಸೇತುವೆ.

ಪ್ರತಿ ಮಾಹಿತಿಗಾಗಿ:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂಚಾಯತ್ ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

